ಆ) ಅದಕ್ಕಾಗಿ ಒದಗಿಸಲಾದ ಹಣವೆಷ್ಟು?

ಇ) ಎಷ್ಟು ದಿನಗಳಲ್ಲಿ ಆ ಕೆಲಸವು ಪೂರ್ಣವಾಗುವುದು?

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):

ಅ) ಭದ್ರಾ ಅರಣ್ಯದಲ್ಲಿ ವಾಸಿಸುವ ಜನರ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಮತ್ತು ಪುನರ್ವಸತಿ ಕಲ್ಪಿಸಲು 12.76 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಈ ಯೋಜನೆಯನ್ನು ಕೇಂದ್ರ ಸರ್ಕಾರದ ಧನಸಹಾಯವನ್ನು ಕೋರಿ ಸಲ್ಲಿಸಲಾಗಿದೆ.

ಆ) ಕೇಂದ್ರ ಸರ್ಕಾರದಿಂದ ಹಣ ಇನ್ನೂ ಒದಗಿಸಿರುವುದಿಲ್ಲ.

ಇ) ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾದ ಕೂಡಲೇ ಭೂಸ್ವಾಧೀನಕ್ಕೆ ಬೇಕಾದ ಹಣದಲ್ಲಿ $\frac{1}{4}$ ಭಾಗವನ್ನು ಕಂದಾಯ ಇಲಾಖೆಗೆ ಪಾವತಿ ಮಾಡಿ ಭೂಸ್ವಾಧೀನ ಕಾರ್ಯಕ್ರಮವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಹಿರೇಕೆರೂರು ತಾಲ್ಲೂಕಿನಲ್ಲಿ "ಕ್ಷ-ಕಿರಣ ಯಂತ್ರ ಇಲ್ಲದ ಬಗ್ಗೆ

279 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು): ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಮಲೆನಾಡಿನ ಗ್ರಾಮೀಣ ಪ್ರದೇಶ ಎನ್ನುವುದನ್ನು ಸರ್ಕಾರ ಗಮನಿಸಿದೆಯೇ?

ಆ) ತಾಲ್ಲೂಕಿನಲ್ಲಿ ಯಾವುದೇ ಆಸ್ಪತ್ರೆಯಲ್ಲಿಯೂ ಕ್ಷ-ಕಿರಣ ಯಂತ್ರ ಇಲ್ಲವೆ ಸಾರ್ವಜನಿಕರಿಗೆ ಅತ್ಯಂತ ತೊಂದರೆ ಹಾಗೂ ಅನ್ಯಾಯವಾಗಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಈಗಲಾದರೂ ಹಿರೇಕೆರೂರು ತಾಲ್ಲೂಕಿಗೆ ಕ್ಷ-ಕಿರಣ ಯಂತ್ರವನ್ನು ಒದಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಈ) ಆ ಬಗ್ಗೆ ಸರ್ಕಾರದ ನೀತಿ ಹಾಗೂ ನಿರ್ದಿಷ್ಟ ನಿರ್ಣಯಗಳೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಸರ್ಕಾರವು ಗಮನಿಸಿದೆ.

ಆ) ಸರ್ಕಾರವು ಗಮನಿಸಿದೆ.

ಇ) ಧಾರವಾಡ ಜಿಲ್ಲಾ ಪರಿಷತ್ತು ನಾಲ್ಕು ಕ್ಷ-ಕಿರಣ ಯಂತ್ರಗಳ ಖರೀದಿಗೆ ಅನುಮತಿ ನೀಡಿದ್ದು, ಇವುಗಳಲ್ಲಿ ಒಂದು ಕ್ಷ-ಕಿರಣ ಯಂತ್ರವನ್ನು ಹಿರೇಕೆರೂರು ಸಾರ್ವಜನಿಕ ಆಸ್ಪತ್ರೆಗೆ ಒದಗಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಧಾರವಾಡ ಜಿಲ್ಲಾ ಪರಿಷತ್ತು ಇವರಿಗೆ ತಿಳಿಸಲಾಗುವುದು.

ಈ) ರಾಜ್ಯ ಸರ್ಕಾರವು 100 ಹಾಸಿಗೆಗಳಿಗಿಂತ ಹೆಚ್ಚಿನ ಹಾಸಿಗೆಗಳುಳ್ಳ ಆಸ್ಪತ್ರೆಗಳನ್ನು ಅಧೀನಕ್ಕೆ ತೆಗೆದುಕೊಂಡಿದ್ದಲ್ಲ ಇವುಗಳಿಗೆ ಕ್ಷ-ಕಿರಣ ಯಂತ್ರಗಳನ್ನು ಸರಬರಾಜು ಮಾಡುವ ಜವಾಬ್ದಾರಿ ರಾಜ್ಯಸರ್ಕಾರದ್ದಾಗಿರುತ್ತದೆ. ಉಳಿದ ಆಸ್ಪತ್ರೆಗಳು ಜಿಲ್ಲಾ ಪರಿಷತ್ತ ವ್ಯಾಪ್ತಿಯಲ್ಲಿ ಬರುವುದರಿಂದ ಈ ಆಸ್ಪತ್ರೆಗಳಿಗೆ ಕ್ಷ-ಕಿರಣ ಯಂತ್ರ ಸರಬರಾಜು ಮಾಡುವ ಹೊಣೆ ಸಂಬಂಧಪಟ್ಟ ಜಿಲ್ಲಾಪರಿಷತ್ತದ್ದಾಗಿರುತ್ತದೆ.

ರಾಜ್ಯದಲ್ಲಿ ಮಂಜೂರಾದ ಪಶುವೈದ್ಯ ಶಾಲೆಗಳ ಸಂಖ್ಯೆ

236 - ಶ್ರೀಮತಿ ಮೋಟಮ್ಮ (ಮೂಡಿಗೆರೆ); ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?